ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಸರ್ಕಾರದ ಪತ್ರ ಸಂಖ್ಯೆ:ಆರ್‌ಡಿ 429 ಎಲ್‌ಜಿಪಿ 2013 ದಿನಾಂಕ: 30–09–2014ರ ಪತ್ರದಲ್ಲಿ ನಮೂನೆ 50–53ರಲ್ಲಿ ಅರ್ಜಿಯಲ್ಲಿ ಕುಮ್ಕಿ ಖಾನೆ ಬಾನೆ ಜಮೀನಿನಲ್ಲಿ ಇರುವ ಅರ್ಜಿದಾರರನ್ನು ಒಕ್ಕಲೆಬ್ಬಿಸುವಂತಿಲ್ಲ ಎಂಬುದಾಗಿ ನಿರ್ದೇಶನ ನೀಡಲಾಗಿರುತ್ತದೆ. ಕುಮ್ಕಿ ಜಮೀನುಗಳು (privileged) ವಿಶೇಷ ಸವಲತ್ತುಗಳ ಜಮೀನಾಗಿದ್ದು ನಮೂನೆ 50–53 ರಡಿ ಅನುಬೋಗದಾರಿಕೆ ಹಕ್ಕನ್ನು ಕೊಡಲು ಬರುವುದಿಲ್ಲ.

ಆ) ಕುಮ್ಕಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ಜಮೀನುಗಳನ್ನು ಸಕ್ರಮಗೊಳಿಸಲು ಕರಡು ನಿಯಮಗಳನ್ನು ರೂಪಿಸಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ 46 ಎಲ್‌ಜಿಪಿ 2012 (ಭಾಗ–1) ದಿನಾಂಕ:08–02–2013ರಲ್ಲಿ ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆ ಹೊರಡಿಸಲು ಪರಿಶೀಲನೆಯಲ್ಲಿರುತ್ತದೆ.

ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ

928 (465); ಶ್ರೀ ಗೋಪಾಲಯ್ಯ.ಕೆ. (ಮಹಾಲಕ್ಷ್ಮೀ ಲೇಔಟ್)

ಅ) ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳಿವೆ.

ಆ) ಇವುಗಳಲ್ಲಿನ ಸೀಟುಗಳ ಸಂಖ್ಯೆ ಎಷ್ಟು;

ಇ) ಬೆಂಗಳೂರಿನ ಉತ್ತರ ಭಾಗದಲ್ಲಿ ಹೊಸದಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಬೆಂಗಳೂರು ನಗರದಲ್ಲಿ ಒಟ್ಟು 6 ಸ್ಥಳಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

1. ಕೈಗಾರಿಕಾ ತರಬೇತಿ ಸಂಸ್ಥೆ (ಪು), ಹೊಸೂರು ರಸ್ತೆ, ಬೆಂಗಳೂರು–29.
2. ಕೈಗಾರಿಕಾ ತರಬೇತಿ ಸಂಸ್ಥೆ (ಮ), ಹೊಸೂರು ರಸ್ತೆ, ಬೆಂಗಳೂರು–29.
3. ಕೈಗಾರಿಕಾ ತರಬೇತಿ ಸಂಸ್ಥೆ ಪೀಣ್ಯ, ಬೆಂಗಳೂರು–22.
4. ಕೈಗಾರಿಕಾ ತರಬೇತಿ ಸಂಸ್ಥೆ ಬಿ.ಟಿ. ಸೆಂಟರ್, ಬೆಂಗಳೂರು–22.
5. ಕೈಗಾರಿಕಾ ತರಬೇತಿ ಸಂಸ್ಥೆ ವಿವೇಕನಗರ, ಬೆಂಗಳೂರು–27.
6. ಕೈಗಾರಿಕಾ ತರಬೇತಿ ಸಂಸ್ಥೆ ಹೊಸಕೆರೆಹಳ್ಳಿ, ಬೆಂಗಳೂರು–85.

ಆ) ಈ ಏಳು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಒಟ್ಟು 3352 ಸೀಟುಗಳು ಲಭ್ಯವಿರುತ್ತದೆ.

ಇ) ಸದ್ಯಕ್ಕೆ ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಬೆಂಗಳೂರಿನ ಉತ್ತರ ಭಾಗದಲ್ಲಿ ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿರುವುದಿಲ್ಲ.

ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುವ ಕನ್ನಡಿಗರು

929 (466); ಶ್ರೀ ಗೋಪಾಲಯ್ಯ.ಕೆ. (ಮಹಾಲಕ್ಷ್ಮೀ ಲೇಔಟ್)

ಅ) ಬೆಂಗಳೂರು ನಗರದಲ್ಲಿ ಕಾರ್ಮಿಕ ಇಲಾಖೆ ವ್ಯಾಪ್ತಿಯಲ್ಲಿ ಬರತಕ್ಕ ಕಾರ್ಖಾನೆಗಳೆಷ್ಟು;

ಆ) ಈ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು

ಇ) ಈ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರೆಷ್ಟು;

ಈ) ಈ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ? (ಪೂರ್ಣ ಮಾಹಿತಿ ನೀಡುವುದು)